ಬೆಂಗಳೂರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರೆಸ್ಟ್ ಯೂನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ನಾದರ್‌ಮಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮಕ್ಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಫಾಯಿಷಾಗಿರುವ ಅದೇ ಇಸವಿ ಜನವರಿ 23ನೇ ಮಕ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರ್‌ಗಳ ನಡವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್‌ದಾರ್‌ರೇಆಗಲಿ ಅವರ ಗೈರಹಾಜರಿಯಲ್ಲಿ ಶಿರಸ್ತಾರ್‌ರೇಆಗಲಿ ಈ ಬಗ್ಯೆ ಡೆಪ್ಯೂಟಿ ಕಮ್ಮಿಷನರವರಿಂದ ಗೊತ್ತುಮಾಡುವ ಸ್ಥಳಗಳಲ್ಲಿ ಫಸಲನ್ನು ಹರಾಜು ಮಾಡುವರು. ಕಾರ್ತೀಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖೀ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್‌ದಾರ್‌ರು ಪ್ರಕಟಿಸುತ್ತಾರೆ. ಇನ್ನೊಂದು ಹುಕುಂ ಕೊಡುವವರಿವಿಗೂ ಕ್ಲೋಸ್‌ಪೇಟೆ ಸಬ್ ಡಿವಿಜನಿನಲ್ಲಿ ಈ ಕೆಳಗೆ ನಮೂದುಮಾಡಿರುವ ಸ್ಥಳಗಳಲ್ಲಿ ಹರಾಜ್ ಮಾಡಲ್ಪಡುತ್ತೆ.

(3) ಹರಾಜು ಷರತ್ತುಗಳೇನಂದರೆ:—

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ಮಾಡುವದಿಲ್ಲ.

(b) ಆಖ್ಯೆರ್ ಚಿಡಸವಾಲ್ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಚಿಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟು ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ಮತ್ತು ರೂಪಾಯಿ 1ಕ್ಕೆ ಬಂದಾಣಿ ಮೇರೆಗೆ ಆಗುವ ಲೋಕಲ್ ಸೆಸ್ಸನ್ನೂ ಸಹ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟ್ಟನ್ನ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜ್ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನ ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖೀ ಫಸಲನ್ನು ಜೂ 1ನೇ ತಾರೀಖು ಲಾಗಾಯತು ಡಿಸೆಂಬರು 31ರ ವರಿಗೂ, ಕಾರ್ತೀಕ ಫಸಲನ್ನು ಜನವರಿ 1ನೇ ತಾರೀಖು ಲಾಗಾಯತು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ತಾಲ್ಲೂಕು.	ತಾಲ್ಲೂಕಿನಲ್ಲಿ ಹರಾಜ್ ಮಾಡುವ ಸ್ಥಳ.
ಚನ್ನಪಟ್ಟಣ ..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು ಮರವಳಿ (ಜಂಗಲಿ ಪಸಾರೆ ಚನ್ನಪಟ್ಟಣದ ಕಸಬೆಯಲ್ಲಿ ಮಾತ್ರ) ಹರಾಜ್‌ಮಾಡಲ್ಪಡುತ್ತೆ)
ಕಾರ್ಕಾನಹಳ್ಳಿ ..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಮಾಗಡಿ ..	ಮಾಗಡಿ ತಾವರೆಕೆರೆ, ಸೋಲೂರು, ಕುದೂರು ಮೊಕ್ಕಾಂಗಳಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಕ್ಲೋಸ್‌ಪೇಟೆ ..	ಬಿಡದಿ ಮತ್ತು ಕ್ಲೋಸ್‌ಪೇಟೆಯಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)

ಬಿ. ಈಪ್ಪಸಾಮಿನಾಯಡು,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫಿಸಿನಿಂದ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ವೆಸ್ಟ್ರ್ ಎಕ್ಸ್‌ಟೆರ್ಷ್ ಮಹಮರ್ಡ್ ಕಮ್ಯೂನಿಟೀಗೆ ಸೇರಿದ ಈ ಕೆಳಗೆ ನಮೂದಿಸುವ ಅಳತೆಗಳುಳ್ಳ 10 ಪತ್ತು ತಾಕುಗಳು ಚಾಲತಿ ಇಸವಿ ಆಗಸ್ಟ್ 8ನೇ ತಾರೀಖು ಪ್ರಾತಃಕಾಲ 7½ ಘಂಟೆಗೆ ಡಿಟೋ ಜಾಗಾದ ಬಯಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು:—

2. ಸವಾಲ್ ಐದಾದ ಕೂಡ್ಲೆ ಛಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಹಿಸ್ಸೆಯನ್ನ ಡಿಪಾಜಿಟ್ಟಾಗಿ ಹಾಜರ್‌ಮಾಡಿ ಮಂಜೂರೀ ಆರ್ಡರ್ ಕೊಟ್ಟು 7 ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರೀತಿ ಪಡದು ಜಮ್ಮಿ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದುಮಾಡಿಕೊಂಡ 6 ತಿಂಗಳೊಳಗಾಗಿ ಕಟ್ಟಡವನ್ನ ಕಟ್ಟಿ ಪೂರೈಸಬೇಕು. ಕಾಮಗಾರಿಗೆ ಕ್ರಮವಾಗಿ ಪ್ಲಿಂತ್ ಹಾಜರ್ಮಾಡಿ ಲೈಸೆನ್ಸ್ ಪಡದುಕೊಳ್ಳಬೇಕು. ಹಾಗೆ ಕಟ್ಟಡವನ್ನ ಕಟ್ಟಿಕೊಳ್ಳದೆ ತಪ್ಪಿಹೋದಲ್ಲಿ ಲುಕ್ಸಾನಿಗೆ ಯಾವ ಈಡೂ ಯಿಲ್ಲದೆ ನಿವೇಶನವನ್ನ ಬೋರ್ಡಿಗೆ ಕೇರಿಸಿಕೊಂಡು ಹರಾಜು ಮಾಡಿಸಲ್ಪಡುವದು.

4. ಸವಾಲ್ ಐದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆಯಾಗಲಿ ಅಥವಾ ಮಂಜೂರೀ ಆರ್ಡರ್ ಪಡದ ಏಳು ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಛಡ ಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಕೇರಿದ್ದಾಗಿರುತ್ತೆ.

5. ಯಾವಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈ ಮಾಡಿ ಯಿರುವರು ವುಳಿಸಿಕೊಂಡು ಯಿರುತ್ತಾರೆ.

ತಾರೀಖು 21ನೇ ಜುಲ್ಲೈ 1896.

ತಾಕು ನಂಬರು		ವಿಸ್ತೀರ್ಣ	ತಾಕು ನಂಬರು		ವಿಸ್ತೀರ್ಣ
1	ಸುಮಾರು	$\frac{85+75}{2} \times 30$ ಅಡಿ	6	ಸುಮಾರು	$\frac{50+45}{2} \times 30$ ಅಡಿ
2	,,	$\frac{75+70}{2} \times 30$,,	7	,,	$\frac{45+42}{2} \times 30$,,
3	,,	$\frac{70+60}{2} \times 30$,,	8	,,	$\frac{42+41}{2} \times 30$,,
4	,,	$\frac{60+55}{2} \times 30$,,	9	,,	$\frac{45+55}{2} \times 30$,,
5	,,	$\frac{55+50}{2} \times 30$,,	10	,,	$\frac{55+75}{2} \times 30$,,

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗಾರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ವುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನೂ ಅಡ್ರೆಸ್‌ಗಳನ್ನೂ ಮ್ಯುನಿಸಿಪಲ್ ಹೆಡ್ ಆಫಿಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದಿದೆ.

ಆಫಿಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದು ಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬ್‌ಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್ಮಾಡಿ ಮ್ಯುನಿಸಿಪಲ್ ಆಫಿಸಿನಲ್ಲಿ ಚಿಕಟಾಯಿಸಲ್ಪಡುವದು

ತಾರೀಖು 18ನೇ ಮೇ 1896.

ತಾರೀಖು ನೇ ಜೂ 1896.

ಕಿಲ್ಲೆ ಅಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಕೇಪ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—

1896ನೇ ಜುಲೈ ಗುರ್ತೀ ಲಾಗಾಯಿತು ಮೂರು ತಿಂಗಳ ವಳಗಾಗಿ ಕಿಲ್ಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಅನ್ಯಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಕೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ್ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.